ಅ) ರಾಜ್ಯದಲ್ಲಿರುವ ಎಲ್ಲಾ ಕೊಳಚೆ ಪ್ರದೇಶಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಮುಂದೆ ಯೋಜನೆಯೇನಾದರೂ ಇದೆಯೆ?

ಆ) ಹಾಗಿದ್ದಲ್ಲಿ, ಅದರ ರೂಪರೇಷೆಗಳೇನು?

ಇ) ಮುಳಬಾಗಿಲು ಟೌನಿನಲ್ಲಿರುವ ಕೊಳಚೆ ಪ್ರದೇಶಗಳೆಷ್ಟು?

ಈ) ಅವುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು? ಅಂತಹ ಕೊಳಚೆ ಪ್ರದೇಶಗಳ ಒಟ್ಟು ಜನಸಂಖ್ಯೆ ಎಷ್ಟು?

ಉ) ಆ ಕೊಳಚೆ ಪ್ರದೇಶಗಳಲ್ಲಿ ಇದುವರೆಗೂ ಕೈಗೊಂಡಿರುವ ಕಾರ್ಯಗಳೇನು? ಹಾಗೂ ಮತ್ತು ಅದಕ್ಕೆ ಖರ್ಚು ಮಾಡಿರುವ ಒಟ್ಟು ಹಣದ ಮೊತ್ತವೆಷ್ಟು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):–

ಅ) –ಹೌದು–

ಆ) ಮಂಡಳಿಯು ಎರಡು ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತಿದೆ.

1) ಮೂಲಭೂತ ಸೌಲಭ್ಯ ಯೋಜನೆ

2) ವಸತಿ ಗೃಹ ಯೋಜನೆ

ಇ) 12 ಕೊಳಚೆ ಪ್ರದೇಶಗಳು

ಈ) ಮುಳಬಾಗಿಲು ಪಟ್ಟಣದಲ್ಲಿ ಗುರ್ತಿಸಿರುವ 12 ಕೊಳಚೆ ಪ್ರದೇಶಗಳಲ್ಲಿ ಮಂಡಳಿಯು ಮೂಲಭೂತ ಸೌಲಭ್ಯ ಒದಗಿಸುವ ಯೋಜನೆಯನ್ನು ಕೈಗೊಂಡಿದೆ. ಇವುಗಳ ಒಟ್ಟು ಅಂದಾಜು ಜನಸಂಖ್ಯೆ 7930.

ಉ) ಮೇಲ್ಕಂಡ ಕೊಳಚೆ ಪ್ರದೇಶಗಳಲ್ಲಿ 1990 ಮಾರ್ಚ್‌ರವರೆಗೆ ಮಂಡಳಿಯು ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಕುಡಿಯುವ ನೀರು, ಸ್ನಾನ ಗೃಹ, ಬೀದಿದೀಪ, ಸಾಮೂಹಿಕ ಶೌಚಾಲಯ ಮತ್ತು ಒಳಚರಂಡಿ ವ್ಯವಸ್ಥೆ ಇವುಗಳಿಗೆ 18.87 ಲಕ್ಷ ರೂ.ಗಳನ್ನು ಖರ್ಚು ಮಾಡಿ ಒದಗಿಸಿದೆ.

ಕೋಲಾರ ಜಿಲ್ಲೆಯಲ್ಲಿ ಕೆರೆಗಳ ಅಭಿವೃದ್ಧಿಪಡಿಸುವ ಬಗ್ಗೆ

361. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳೆಷ್ಟು?

ಆ) ಮೇಲ್ಕಂಡ ಕೆರೆಗಳಲ್ಲಿ ಹೂಳೆತ್ತಲು ಸರ್ಕಾರದ ಮುಂದೆ ಯೋಜನೆಯೇನಾದರೂ ಇದೆಯೇ;

ಇ) ವಿಶ್ವಬ್ಯಾಂಕಿನಿಂದ ಹಣದ ಸಹಾಯ ಪಡೆದು ಹೂಳೆತ್ತುವ ಯೋಜನೆಯನ್ನು ಸರ್ಕಾರದವರು ಕೈಗೊಳ್ಳುವರೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 2769 ಕೆರೆಗಳು

ಆ) ಇಲ್ಲ

ಇ) ವಿಶ್ವಬ್ಯಾಂಕಿನಿಂದ ಹಣದ ಸಹಾಯ ಪಡೆದು ಹೂಳೆತ್ತುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಪ್ರಪಂಚ ಬ್ಯಾಂಕಿನಿಂದ ರೇಷ್ಮೆ ಅಭಿವೃದ್ಧಿಗೆ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ

359. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗೆ ವಿಶ್ವ ಬ್ಯಾಂಕಿನಿಂದ ಬಂದಿರುವ ಹಣವೆಷ್ಟು?

ಆ) ಆ ಹಣದಿಂದ ಕೈಗೊಳ್ಳಬೇಕೆಂದಿರುವ ಅಭಿವೃದ್ಧಿ ಕಾರ್ಯಗಳ ವಿವರಗಳೇನು?

ಇ) ಅದರಲ್ಲಿ ರೇಷ್ಮೆ ಬೆಳೆಯನ್ನೇ ನಂಬಿರುವ ಕೋಲಾರ ಜಿಲ್ಲೆಯಲ್ಲಿ ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮಗಳೆಷ್ಟು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):–

ಅ) ಕರ್ನಾಟಕ ರೇಷ್ಮೆ ಯೋಜನೆ ಮೊದಲ ಹಂತವನ್ನು ಕಾರ್ಯಗತಗೊಳಿಸಲು 53.947 ಮಿಲಿಯನ್ ಯು.ಎಸ್. ಡಾಲರ್ಸ್ (ರೂ. 53.947 ಕೋಟಿ) ನೆರವು ಬಂದಿದೆ, ಎರಡನೆ ಹಂತವನ್ನು ಕಾರ್ಯಗತಗೊಳಿಸಲು ಇದುವರೆವಿಗೂ ವಿಶ್ವಬ್ಯಾಂಕಿನಿಂದ ಹಣ ಬಂದಿರುವುದಿಲ್ಲ.

ಆ) ರಾಷ್ಟ್ರೀಯ ರೇಷ್ಮೆ ಯೋಜನೆ (ಕರ್ನಾಟಕ) ಎರಡನೇ ಹಂತ.

1. ಪಿ2 ಕೃಷಿ ಕ್ಷೇತ್ರಗಳ ಬಲಪಡಿಸುವಿಕೆ 16
2. 8 ಪಿ2 ಮತ್ತು ಪಿ1 ಬಿತ್ತನೆ ಕೋಠಿಗಳ ಸ್ಥಾಪನೆ.
3. 50 ಚಾಕಿ ಸಾಕಾಣಿಕೆ ಕೇಂದ್ರಗಳು (ಬಿತ್ತನೆ ವಲಯ)
4. ತಾಂತ್ರಿಕ ಸೇವಾ ಕೇಂದ್ರಗಳು 96
5. 17 ತಾಂತ್ರಿಕ ಸೇವಾ ಕೇಂದ್ರಗಳು (ರೇಷ್ಮೆ ನೂಲು ಬಿಚ್ಚಾಣಿಕೆ)
6. ತರಬೇತಿ ಶಾಲೆಗಳ ಬಲಪಡಿಸುವಿಕೆ 4
7. ಹೊಸ ತರಬೇತಿ ಶಾಲೆಗಳು 2
8. ರೇಷ್ಮೆ ಗೂಡು ಮಾರುಕಟ್ಟೆಗಳ ಬಲಪಡಿಸುವಿಕೆ 6.
9. ಬಿತ್ತನೆ ವಲಯದ ರೇಷ್ಮೆ ಗೂಡು ಮಾರುಕಟ್ಟೆಗಳು 2.
10. ಖುಷ್ಕಿ ಜಮೀನು ಮೃಮಸಾಯ 370 ಹೆಕ್ಟೇರ್
11. ಚಾಕಿ ಸಾಕಾಣಿಕೆ ಕೇಂದ್ರಗಳ ಪಾಸಗೀಕರಣ 1316
12. ರೇಷ್ಮೆ ಅಭಿವೃದ್ಧಿ ಯೋಜನೆ – 1ರಲ್ಲಿ ಸ್ಥಾಪಿತಗೊಂಡ ರೇಷ್ಮೆ ಬಿತ್ತನೆ ಕೋಠಿಗಳಿಗೆ ನಿರ್ವಹಣಾ ವೆಚ್ಚ.
13. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆ